# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಾರ್ಯಾಲಯ ನಂ 29 ವಿಜಯನಗರ
2ನೇ ಹಂತ, ಹಿನಕಲ್, ಮೈಸೂರು 570017
Web address:www.cescmysore.org.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಕೆ.ಐ.ಎ.ಡಿ.ಬಿ ಉಪ ವಿಭಾಗ, ಸೆಸ್ಕ್, ಹಾಸನ.
ದೂರವಾಣಿ:– 08172– 231288
E-Mail:-aeehsnrsd2@Gmail.com


**ಕ್ರಮಾಂಕ:** ಸಕಾಅ(ವಿ)/ಸಇಂ(ತಾ)/ಕೆಐಎಡಿಬಿ/ಹಾ/2019-20/1475-78 ದಿನಾಂಕ: 14/06/19
ಲಗತ್ತು,:

**"ಜನ ಸಂಪರ್ಕ ಸಭೆಯ ನಡಾವಳಿಗಳು"**

*****

ದಿನಾಂಕ : 12.06.2019 ರಂದು ಮಧ್ಯಾಹ್ನ 3.00 ಗಂಟೆಗೆ ಚಾ.ವಿ.ಸ.ನಿ.ನಿ, ಕೆ.ಐ.ಎ.ಡಿ.ಬಿ ಉಪ ವಿಭಾಗ ಕಛೇರಿ ಸೆಸ್ಕ್ ಹಾಸನ ರವರ ಕಛೇರಿಯಲ್ಲಿ ಶಾಖಾಧಿಕಾರಿಗಳ ಉಪಸ್ಥಿತಿಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

**ಅಧ್ಯಕ್ಷತೆ**

ಶ್ರೀ ಸುಚೇತನ್ ಬಿ.ಎಸ್

ಅಧೀಕ್ಷಕ ಇಂಜಿನಿಯರ್(ವಿ)

ಕಾರ್ಯ ಮತ್ತು ಪಾಲನಾ ವೃತ್ತ ಕಛೇರಿ ಚಾ.ವಿ.ಸ.ನಿ.ನಿ. ಹಾಸನ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಶ್ರೀ ಸುಚೇತನ್ ಬಿ.ಎಸ್, ಅಧೀಕ್ಷಕ ಇಂಜಿನಿಯರ್(ವಿ).ಕಾರ್ಯ ಮತ್ತು ಪಾಲನಾ ವೃತ್ತ ಕಛೇರಿ ಚಾ.ವಿ.ಸ.ನಿ.ನಿ. ಹಾಸನ.
2. ಶ್ರೀ ಸ್ವಾಮಿಗೌಡ ಹೆಚ್.ಎನ್ ಕಾರ್ಯಪಾಲಕ ಅಭಿಯಂತರರು ವಿಭಾಗೀಯ ಕಛೇರಿ ಸೆಸ್ಕ್ ಹಾಸನ.
3. ಶ್ರೀ ಸಂಜಯ್ ಎಚ್.ಎನ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)ಕಾ ಮತ್ತು ಪಾ ವಿಭಾಗ ಕೆ.ಐ.ಎ.ಡಿ.ಬಿ ಉಪ ವಿಭಾಗ ಸೆಸ್ಕ್ ಹಾಸನ.
4. ಶ್ರೀ ಗಿರಿರಾಜ್ ಸಿ.ಕೆ ಪ್ರಭಾರಿ ಸ.ಇಂ(ವಿ), ತಾಂತ್ರಿಕ ಶಾಖೆ, ಕೆಐಎಡಿಬಿ ಉಪವಿಭಾಗ ಹಾಸನ.
5. ಶ್ರೀ ಮಂಜುನಾಥ್ ಸ.ಇಂ(ವಿ), ಕೆಐಎಡಿಬಿ ಶಾಖೆ, ಕೆಐಎಡಿಬಿ ಉಪವಿಭಾಗ ಹಾಸನ.
6. ಶ್ರೀ ಸಾಗರ ಕಿ.ಇಂ(ವಿ), ಮೊಸಳೆ ಹೊಸಹಳ್ಳಿ ಶಾಖೆ, ಕೆಐಎಡಿಬಿ ಶಾಖೆ, ಕೆಐಎಡಿಬಿ ಉಪವಿಭಾಗ ಹಾಸನ.
7. ಶ್ರೀ ಕೆ.ಯೋಗಣ್ಣ ಕಿ,ಇಂ(ವಿ), ಗೊರೂರು ಶಾಖೆ, ಕೆಐಎಡಿಬಿ ಉಪವಿಭಾಗ ಹಾಸನ.

**ಜನಸಂಪರ್ಕ ಸಭೆಗೆ ಹಾಜರಿದ್ದ ಗ್ರಾಹಕರು/ಸಾರ್ವಜನಿಕರು:**

1. ಶ್ರೀ ಬಾಬುರಾಮ್, ಚಿಕ್ಕಬಸವನಹಳ್ಳಿ ಗ್ರಾಮ, ಶಾಂತಿಗ್ರಾಮ ಹೋಬಳಿ.
2. ಶ್ರೀ ಬೋರೇಗೌಡ, ಚಿಕ್ಕಬಸವನಹಳ್ಳಿ ಗ್ರಾಮ, ಶಾಂತಿಗ್ರಾಮ ಹೋಬಳಿ.
3. ಶ್ರೀ ಚಂದ್ರಶೆಟ್ಟಿ, ಬಿಟ್ಟಗೌಡನಹಳ್ಳಿ, ಹಾಸನ.

**ಜನಸಂಪರ್ಕ ಸಭೆಯ ಪ್ರಸ್ತಾವನೆಗಳು:**

- ಶ್ರೀ ಬಾಬುರಾಮ್ ಚಿಕ್ಕಬಸನವಹಳ್ಳಿ ಗ್ರಾಮರವರು ಚಿಕ್ಕಬಸವನಹಳ್ಳಿ ಗ್ರಾಮದಲ್ಲಿ ಜಮೀನಿನ ಮಧ್ಯ ಭಾಗದಲ್ಲಿರುವ ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸಲು ಕೋರಿರುತ್ತಾರೆ ಮತ್ತು ಅದೇ ಗ್ರಾಮದಲ್ಲಿ ವೋಲ್ಟೇಜ್ ಸಮಸ್ಯೆ ಇರುವುದಾಗಿ ತಿಳಿಸಿರುತ್ತಾರೆ ಮತ್ತು ವಿದ್ಯುತ್ ಅಭಿವೃದ್ಧಿ ಕಾರ್ಯಗಳ ಸಂದರ್ಭದಲ್ಲಿ ಆದಷ್ಟು ಕಡಿಮೆ ಸಮಯ ಮಾರ್ಗ ಮುಕ್ತತೆ ತೆಗೆದುಕೊಂಡು ಕೆಲಸ ನಿರ್ವಹಿಸುವಂತೆ ಕೋರಿರುತ್ತಾರೆ. ಅನಧಿಕೃತ ಗುತ್ತಿಗೆದಾರರು ಅನುಮತಿ ಇಲ್ಲದೇ ಕೆಲಸ ನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ.

- ಮೇಲಿನ ದೂರಿನ ಕುರಿತು ಸಭಾಧ್ಯಕ್ಷರು ವಿದ್ಯುತ್ ಮಾರ್ಗದ ಸ್ಥಳಾಂತರವನ್ನು, ನಿಯಮಾನುಸಾರ ಸ್ವಯಂ ನಿರ್ವಹಣಾ ಯೋಜನೆಯಡಿ ನಿರ್ವಹಸಿಕೊಳ್ಳಲು ದೂರುದಾರರಿಗೆ ಸೂಚಿಸಿ, ಚಿಕ್ಕಬಸವನಹಳ್ಳಿ ಗ್ರಾಮದಲ್ಲಿ ವೋಲ್ಟೇಜ್ ಸಮಸ್ಯೆ ಕುರಿತಂತೆ ಸ್ಥಳ ಪರಿಶೀಲನೆ ನಡೆಸಿ, ಅಗತ್ಯ ಬಿದ್ದಲ್ಲಿ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕ್ರಮ ವಹಿಸಲು ಸೂಚಿಸುತ್ತ, ಈ ಕುರಿತಂತೆ ಅಗತ್ಯ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿಕೊಡುವಂತೆ ಹಾಗೂ ಶಾಖಾಧಿಕಾರಿಗಳು, ಮೊಸಳೆ ಹೊಸಳ್ಳಿ ಮತ್ತು ಉಪವಿಭಾಗಾಧಿಕಾರಿಗಳಿಗೆ ಇವರಿಗೆ ಸೂಚಿಸಿರುತ್ತಾರೆ. ಮೊಸಳೆ ಹೊಸಳ್ಳಿ

ಶಾಖಾಧಿಕಾರಿಗಳಿಗೆ ಮತ್ತು ಉಪವಿಭಾಗಾಧಿಕಾರಿಗಳಿಗೆ ಅನಧಿಕೃತ ಗುತ್ತಿಗೆದಾರರು ಅನುಮತಿ ಇಲ್ಲದೇ ಕೆಲಸ ನಿರ್ವಹಿಸದಂತೆ ಅಗತ್ಯ ಕ್ರಮ ಜರುಗಿಸಲು ತಿಳಿಸಿರುತ್ತಾರೆ.

- ಬೋರೇಗೌಡ ಚಿಕ್ಕಬಸನವಹಳ್ಳಿ ಗ್ರಾಮ ರವರು NJY/Urban ಮಾರ್ಗದಲ್ಲಿ ಬರುವ ಐ.ಪಿ ಸ್ಥಾವರಗಳನ್ನು ಸಕ್ರಮೀಕರಣಗೊಳಿಸುವ ಬಗ್ಗೆ ತಿಳಿಸುವಂತೆ ಕೋರಿರುತ್ತಾರೆ.

  ಮೇಲಿನ ದೂರಿನ ಕುರಿತು ಸಭಾಧ್ಯಕ್ಷರು NJY/Urban ಮಾರ್ಗದಲ್ಲಿ ಬರುವ ಐ.ಪಿ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕವನ್ನು ಅರ್ಜಿದಾರರು ALMU ಸಹಿತವಾಗಿ ಅಳವಡಿಸಿಕೊಳ್ಳಬೇಕಿರುವುದಾಗಿ ತಿಳಿಸಿರುತ್ತಾರೆ.

- ಚಂದ್ರಶೆಟ್ಟಿ ಬಿಟ್ಟಗೌಡನಹಳ್ಳಿ ರವರು RL-38189 ಈ ಸ್ಥಾವರದಲ್ಲಿ ಹೆಚ್ಚುವರಿ ಬೇಡಿಕೆ ಉಂಟಾಗಿರುವ ಬಗ್ಗೆ ವಿಚಾರಿಸಿರುತ್ತಾರೆ.

  ಮೇಲಿನ ದೂರಿನ ಕುರಿತು ಸಭಾಧ್ಯಕ್ಷರು ಸದರಿ ಸ್ಥಾವರದ ಮೀಟರ್‌ನ್ನು ನಿಯಮಾನುಸಾರ ಎಲ್.ಟಿ.ರೇಟಿಂಗ್ ಉಪ ವಿಭಾಗದಿಂದ ಪರೀಕ್ಷಿಸಿಕೊಳ್ಳಲು ತಿಳಿಸಿರುತ್ತಾರೆ.

ಅಧೀಕ್ಷಕ ಇಂಜಿನಿಯರ್(ವಿ), ರವರು ಆಗಮಿಸಿದ್ದ ಎಲ್ಲಾ ಸದಸ್ಯರುಗಳಿಗೆ ವಂದಿಸುತ್ತಾ ಹಾಗು ಈ ದೂರುಗಳ ಬಗ್ಗೆ ನಿಯಮಾನುಸಾರ ಅಗತ್ಯ ಕ್ರಮ ವಹಿಸುವಂತೆ ಸೂಚಿಸಿ ಸಭೆಯನ್ನು 5 :30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕೆಐಎಡಿಬಿ ಉಪ ವಿಭಾಗ, ಚಾ.ವಿ.ಸ.ನಿ.ನಿ.,ಹಾಸನ

ಪ್ರತಿಯನ್ನು :

1. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ, ವೃತ್ತ ಕಛೇರಿ, ಚಾ.ವಿ.ಸ.ನಿ.ನಿ., ಹಾಸನರವರ ಆದ್ಯ ಮಾಹಿತಿಗೆ ಸಲ್ಲಿಸಲಾಗಿದೆ.
2. ಕಾರ್ಯಪಾಲಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ, ವಿಭಾಗೀಯ ಕಛೇರಿ, ಚಾ.ವಿ.ಸ.ನಿ.ನಿ, ಹಾಸನರವರ ಆದ್ಯ ಮಾಹಿತಿಗೆ ಸಲ್ಲಿಸಲಾಗಿದೆ.
3. ಶಾಖಾಧಿಕಾರಿಗಳು ಕೆ.ಐ.ಎ.ಡಿ.ಬಿ, ಮೊಸಳೆ ಹೊಸಳ್ಳಿ,ಗೊರೂರು ಶಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ.
4. ಕಛೇರಿ ಕಡತಕ್ಕೆ/-

ಅ ಇಂ(ವಿ) ಚಾವಿಸನಿನಿ
ವೃತ್ತ ಕಛೇರಿ, ಹಾಸನ
ಕಾ.ನಿ.ಇಂ.(ಕ)
ಉ.ಲೆ.ನಿ.
ಸ.ಕ.ನಿ.ಇಂ.(ಕ)
ಸ.ಕಾ.ನಿ.ಇಂ.(ಸಿವಿಲ್)
ಸ.ಇಂ.(ವಿ)
ಕಿ.ಇಂ.(ವಿ)
ಸ.ಲೆ.
ಓ.ಆ.ಸೆ.
ಮು.ಗು.
ಆರ್.ಡಿ ಆರ್
ಅ.ಇಂ.(ವಿ)